# ಆರನೆಯ ತರಗತಿ (ದ್ವಿತೀಯ ಭಾಷೆ ಕನ್ನಡ)

ಗೌರವಾನ್ವಿತ ಶಿಕ್ಷಕ ಬಾಂಧವರೆ,

ಸೇತುಬಂಧ ಕಾರ್ಯಕ್ರಮವು ಶಿಕ್ಷಕರಿಗೆ ಚಿರಪರಿಚಿತವಾಗಿದ್ದರೂ ಈ ಸಾಲಿನ ಸೇತುಬಂಧ ನವೀನ ಹಾಗೂ ಸವಾಲಿನಿಂದ ಕೂಡಿದೆ. ಕೋವಿಡ್-19ರ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಶಾಲೆಗಳು ಸಮರ್ಪಕವಾಗಿ ನಡೆದಿಲ್ಲವಾದ ಕಾರಣ ಈ ಸಾಲಿನ ಶೈಕ್ಷಣಿಕ ವರ್ಷದ ಸೇತುಬಂಧ ಕಾರ್ಯಕ್ರಮವು ಶಿಕ್ಷಕರಾದ ನಮಗೆ ಸವಾಲಾಗಿದೆ. ವಿದ್ಯಾರ್ಥಿಗಳು ಆಯಾ ತರಗತಿಯಲ್ಲಿ ಗಳಿಸಬೇಕಾದ ಸಾಮರ್ಥ್ಯವನ್ನು ಗಳಿಸಲು ಕಷ್ಟಸಾಧ್ಯವಾಗಿರುವುದರಿಂದ ಕಲಿಕಾ ಕೊರತೆ ಉಂಟಾಗಿರುತ್ತದೆ.ಇದನ್ನು ಸರಿದೂಗಿಸುವ ನಿಟ್ಟಿನಲ್ಲಿ ಈ ಸಾಹಿತ್ಯವು ಪೂರಕವಾಗಿರುತ್ತದೆ.

ಶಿಕ್ಷಕರು, ಸೇತುಬಂಧ ಸಾಹಿತ್ಯದಲ್ಲಿರುವ ಮೂವತ್ತು ದಿನಗಳ ‘ಬಂಧ’ ಸಾಹಿತ್ಯದಲ್ಲಿ ನೀಡಿರುವ ಸೂಚನೆಯಂತೆ ಚಟುವಟಿಕೆಗಳನ್ನು ನಡೆಸಿ ವಿದ್ಯಾರ್ಥಿಗಳನ್ನು ಸದರಿ ತರಗತಿಗೆ ಸಿದ್ಧಗೊಳಿಸಬೇಕು.

ಈ ಮೂರು ಹಂತದ ಬೋಧನಾ ಕಲಿಕಾ ಪ್ರಕ್ರಿಯೆಯು ಶಿಶು ಕೇಂದ್ರಿತ, ಚಟುವಟಿಕೆ ಆಧಾರಿತ ಮತ್ತು ಸಂತಸದಾಯಕ ಕಲಿಕೆಗೆ ಒತ್ತು ನೀಡುವಂತಿರಬೇಕು. ಇದಕ್ಕಾಗಿ ಶಿಕ್ಷಕರು ಉತ್ತಮ ರೀತಿಯಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಅಗತ್ಯ ಮತ್ತು ಅತ್ಯಂತ ಅನಿವಾರ್ಯವಾಗಿದ್ದು ನಿಮ್ಮ ಸೃಜನಶೀಲತೆಗೆ ಪೂರ್ಣ ಅವಕಾಶವಿರುತ್ತದೆ.

- ಸೇತುಬಂಧ ಕಾರ್ಯಕ್ರಮದ ಈ ಸಾಹಿತ್ಯವನ್ನು ಶಿಕ್ಷಕರು ಓದಿ, ಅರ್ಥೈಸಿಕೊಳ್ಳುವುದು.
- ಇಲ್ಲಿನ ಚಟುವಟಿಕೆಗಳು ಕೇವಲ ಮಾದರಿಯಷ್ಟೆ. ಶಿಕ್ಷಕರು ವಿಭಿನ್ನವಾದ ರೀತಿಯಲ್ಲಿ ಸೃಜನಾತ್ಮಕವಾಗಿ ಚಟುವಟಿಕೆಗಳನ್ನು ರೂಪಿಸಿಕೊಳ್ಳುವುದು.
- ಆರನೆಯ ತರಗತಿಯ ಈ ಸಾಹಿತ್ಯದಲ್ಲಿ ನಾಲ್ಕು ಮತ್ತು ಐದನೆಯ ತರಗತಿಯ ಅಪೇಕ್ಷಿತ ಕಲಿಕಾಫಲ ಹಾಗೂ ಕಲಿಕಾಂಶಗಳನ್ನು ಗಮನಿಸಿ ಚಟುವಟಿಕೆಗಳನ್ನು ರೂಪಿಸಲಾಗಿದೆ.
- ಈ ಸಾಹಿತ್ಯದಲ್ಲಿ ಅನೇಕ ಸಲಹಾತ್ಮಕ ಚಟುವಟಿಕೆಗಳನ್ನು ನೀಡಲಾಗಿದ್ದು ಶಿಕ್ಷಕರು ನಿರ್ವಹಿಸಬೇಕಾದ ಒಂದು ಚಟುವಟಿಕೆಯ ಬಗ್ಗೆ ವಿವರಣೆ ನೀಡಲಾಗಿದೆ. ಉಳಿದ ಚಟುವಟಿಕೆಗಳ ಹೆಸರುಗಳನ್ನು ಮಾತ್ರ ನೀಡಲಾಗಿದ್ದು ಶಿಕ್ಷಕರು ತಮಗೆ ಇಷ್ಟವಾದ ಚಟುವಟಿಕೆಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ತಿಳಿಸಿದೆ.

ಸೇತುಬಂಧ 'ಬಂಧ' ಸಾಹಿತ್ಯ

ತರಗತಿ : 6

ವಿಷಯ :ಕನ್ನಡ (ದ್ವಿತೀಯಭಾಷೆ)

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|---|
| 1 | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗೀತೆ/ಜನಪದ ಗೀತೆಗಳನ್ನು ಆಲಿಸುವುದರ ಜತೆಗೆ ಅರ್ಥಮಾಡಿಕೊಳ್ಳುವರು | ಆಲಿಸಿದ ಸರಳ ಪ್ರಾಸಗೀತೆಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ. | 1.1 ಪ್ರಾಸಹಾಡು- ಮಜಾನೋಡು<br>1.2 ಭಾವಕ್ಕೊಂದು ಗೀತೆ<br>1.3 ಕೀರ್ತನ ಕೇಳು – ಕೀರ್ತಿವಂತನಾಗು. | 1.1 ಸರಳ ಪ್ರಾಸಗೀತೆಗಳನ್ನು ಧ್ವನಿ ಸುರುಳಿಗಳ ಮೂಲಕ ಕೇಳಿಸುವುದು ಮತ್ತು ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸಿ ಪಟ್ಟಿ ಮಾಡಿಸಿ/ಹೇಳಿಸಿ.<br>1.2 ಮಕ್ಕಳಿಗೆ ಭಾವಗೀತೆಗಳನ್ನು ಸಂಗ್ರಹಿಸಿ ತರಲು ಹೇಳುವುದು ಹಾಗೂ ಹಾಡಿಸಿ.<br>1.3 ಸರಳ ಜನಪ್ರಿಯ ದಾಸರ ಕೀರ್ತನಗಳನ್ನು ಧ್ವನಿಸುರುಳಿಯಿಂದ ಕೇಳಿಸಿ, ಹಾಡಿಸಿ. |
| 2 | | ಆಲಿಸಿದ ಜನಪದ ಗೀತೆಗಳಲ್ಲಿರುವ ಗ್ರಾಮೀಣ ಸೊಗಡನ್ನು ಆಲಿಸಿ ಆನಂದಿಸುತ್ತಾರೆ. | 2.1 ಜನಪದಹಾಡು –ಹಳ್ಳಿಯ ಸೊಗಡು<br>2.2 ತ್ರಿಪದಿ ಆಲಿಸಿ<br>2.3 ಸೋಬಾನ ಸೊಗಸು | 2.1 ಜನಪದ ಗೀತೆಗಳನ್ನು ಕೇಳಿಸಿ ಮಕ್ಕಳಿಂದ ಸಾಮೂಹಿಕವಾಗಿ ಹಾಡಿಸಿ.<br>2.2 ಜನಪದ ತ್ರಿಪದಿಗಳನ್ನು ಸಂಗ್ರಹಿಸಿ ತರಲು ಸೂಚಿಸಿ ಪ್ರತಿ ವಿದ್ಯಾರ್ಥಿಗಳಿಂದಲೂ ಹಾಡಿಸಿ.<br>2.3 ಸೋಬಾನ ಗೀತೆಗಳನ್ನು ಧ್ವನಿಸುರುಳಿ ಮೂಲಕ ಕೇಳಿಸಿ ಮತ್ತು ಅರ್ಥ ತಿಳಿಸಿ. |
| 3 | ಜನಪ್ರಿಯ ಸರಳ ಕಥೆಗಳನ್ನು /ನಾಟಕಗಳನ್ನು ಆಲಿಸುವುದರ ಜತೆಗೆ ಅರ್ಥ | ಕಥೆಯನ್ನು ಆಲಿಸಿ ಸರಳ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ | 3.1 ಕೇಳು-ಕಥೆ<br>3.2 ಪಂಚತಂತ್ರ ಕೇಳು ನೀತಿ ಹೇಳು<br>3.3 ಕೈಗೊಂಬೆ ಪ್ರದರ್ಶನ | 3.1 ಶಿಕ್ಷಕರು/ ದೃಕ್-ಶ್ರವಣ ಉಪಕರಣ ಬಳಸಿ ಕಥೆ ಹೇಳಿಸಿ. ಕಥೆಗೆ ಸಂಬಂಧಿಸಿದಂತೆ ಸರಳಪ್ರಶ್ನೆಕೇಳಿ ಉತ್ತರ ಪಡೆಯಿರಿ.<br>3.2 ಸರಳ ಮತ್ತು ಜನಪ್ರಿಯ ಪಂಚತಂತ್ರದ ಕಥೆಗಳನ್ನು ಕೇಳಿಸಿ ವಿದ್ಯಾರ್ಥಿಗಳಿಂದ ನೀತಿ ಹೇಳಿಸಿ.<br>3.3 ಕೈಗೊಂಬೆ ಪ್ರದರ್ಶನವನ್ನು ಏರ್ಪಡಿಸಿ |

| | | | | |
|---|---|---|---|---|
| | ಮಾಡಿಕೊಳ್ಳುವರು. | | | ಸರಳ ಹಾಗೂ ಜನಪ್ರಿಯ ನೀತಿ ಕಥೆಗಳನ್ನು ನಿರೂಪಿಸಿ, ಸಂಭಾಷಣೆಯನ್ನು ಅನುಕರಿಸುವಂತೆ ವಿದ್ಯಾರ್ಥಿಗಳಿಗೆ ತಿಳಿಸಿ. |
| 4 | | ನಾಟಕದಲ್ಲಿ ಬರುವ ಪಾತ್ರಗಳ ನಡುವಿನ ಸಂಭಾಷಣೆಯನ್ನು ಆಲಿಸಿ ಅರ್ಥ ಮಾಡಿಕೊಳ್ಳುತ್ತಾರೆ. | 4.1 ನಾಟಕ ಆಲಿಸು<br>4.2 ಪಾತ್ರ - ಸಂಭಾಷಣೆ | 4.1 ನಾಟಕದಲ್ಲಿ ಬರುವ ಪಾತ್ರಗಳ ಹೆಸರನ್ನು ಹೇಳಿಸಿ.<br>4.2 ಸಂಕ್ಷಿಪ್ತವಾಗಿ ಪಾತ್ರಗಳ ಸಂಭಾಷಣೆ ಹೇಳಿಸಿ |
| 5 | ದೃಶ್ಯಾವಳಿಯನ್ನು ನೋಡಿ ಸನ್ನಿವೇಶವನ್ನು ಅರ್ಥೈಸಿಕೊಂಡು ವಿವರಿಸುವರು. | ಪ್ರದರ್ಶಿಸಿದಚಿತ್ರವನ್ನು ವೀಕ್ಷಿಸಿ ಅಲ್ಲಿರುವ ಸನ್ನಿವೇಶದ ಬಗ್ಗೆ ನಿರರ್ಗಳವಾಗಿ ಮಾತನಾಡುತ್ತಾರೆ. | 5.1 ಚಿತ್ರನೋಡು-ಮಾತನಾಡು<br>5.2 ನನ್ನ ಅನಿಸಿಕೆ – ನನ್ನ ಅನುಭವ<br>5.3 ವಿಶೇಷ ಅನುಭವ | 5.1 ವಿವಿಧ ಸನ್ನಿವೇಶಗಳನ್ನು ಸಾರುವ ಚಿತ್ರಗಳನ್ನುತೋರಿಸಿ.ಚಿತ್ರದ ಬಗ್ಗೆ ಸರಳ ವಾಕ್ಯಗಳಲ್ಲಿ ಮಾತನಾಡಿಸಿ.<br>5.2 ಶಾಲೆಯಲ್ಲಿ ನಡೆದ ವಿವಿದ ಕಾರ್ಯಕ್ರಮಗಳ ಬಗ್ಗೆ ವಿದ್ಯಾರ್ಥಿಗಳಿಂದ ಮಾತನಾಡಿಸಿ.<br>5.3 ವಿದ್ಯಾರ್ಥಿ ತನ್ನ ಜೀವನದಲ್ಲಿ ಘಟಿಸಿದ ವಿಶೇಷ ಅನುಭವಗಳ ಬಗ್ಗೆ ಸಹಜವಾಗಿ ಅಭಿವ್ಯಕ್ತಿಸಲು ಪ್ರೇರೇಪಿಸಿ. |
| 6 | | ತೋರಿಸಿದ ಚಿತ್ರಸರಣಿಯನ್ನು ವೀಕ್ಷಿಸಿ ಅಲ್ಲಿರುವ ಕಥೆಯನ್ನು ತನ್ನ ಧಾಟಿಯಲ್ಲಿ ಸ್ಪಷ್ಟವಾಗಿ ಹೇಳುತ್ತಾರೆ. | 6.1 ಚಿತ್ರ-ಕಥೆ<br>6.2 ನೆಚ್ಚಿನ ಪುಸ್ತಕ<br>6.3 ಮೆಚ್ಚಿದ ಸಿನಿಮಾ | 6.1 ಚಿತ್ರಸರಣಿ ನೋಡಿ ತನ್ನದೇ ವಾಕ್ಯಗಳಲ್ಲಿ ಕಥೆ ರಚಿಸಿ ಹೇಳಲು ಪ್ರೇರೇಪಿಸಿ. ವಿದ್ಯಾರ್ಥಿಗಳ ವಾಕ್ಯ ರಚನಾ ಸಾಮರ್ಥ್ಯವನ್ನು ಗುರುತಿಸಿ.<br>6.2 ವಿದ್ಯಾರ್ಥಿಗಳು ಓದಿದ ನೆಚ್ಚಿನ ಪುಸ್ತಕದ ಬಗ್ಗೆ ಮಾತನಾಡಲು ಸೂಚಿಸಿ<br>6.3 ವಿದ್ಯಾರ್ಥಿಯು ತಾನು ನೋಡಿ ಮೆಚ್ಚಿದ ಸಿನಿಮಾ ಕಥೆಯ ಬಗ್ಗೆ ಭಾವಾಭಿನಯದ ಮೂಲಕ ಹೇಳಲು ಪ್ರೇರೇಪಿಸಿ. |

| | | | | |
|---|---|---|---|---|
| 7 | ಸ್ಪಷ್ಟ ಉಚ್ಚಾರಣೆ ಯೊಂದಿಗೆ ನಿರರ್ಗಳವಾಗಿ ಮಾತನಾಡು ವರು | ನೋಡಿದ ವಸ್ತುಗಳ ಬಗ್ಗೆ ವಿವರಿಸುತ್ತಾರೆ | 7.1 ವಸ್ತು ನೋಡು – ಮಾತನಾಡು<br>7.2 ಏಕಪಾತ್ರಾಭಿನ ಯ<br>7.3 ಆಡು-ಮಾತನಾಡು | 7.1 ಶಾಲೆಯಲ್ಲಿ ಲಭ್ಯ ಇರುವ ಕೆಲವು ವಸ್ತುಗಳನ್ನು ಒಂದೆಡೆ ಜೋಡಿಸುವುದು. ವಿದ್ಯಾರ್ಥಿಯು ತನಗೆ ಇಷ್ಟವಾದ ವಸ್ತುವಿನ ಬಗ್ಗೆ ಮಾತನಾಡುವಂತೆ ಹೇಳಿಸಿ.<br>7.2 ವಿದ್ಯಾರ್ಥಿಗಳಿಗೆ ಪರಿಚಿತ ಪಾತ್ರದ ಏಕಪಾತ್ರಾಭಿನಯ ಮಾಡುವಂತೆ ಸೂಚಿಸಿ.<br>7.3 ವಿದ್ಯಾರ್ಥಿಗಳಿಗೆ ಘಟನೆಗಳನ್ನು ನೀಡಿ ಸಹಜವಾಗಿ ಮಾತನಾಡುವಂತೆ ಪ್ರೇರೇಪಿಸಿ |
| 8 | | ಕೊಟ್ಟ ವಿಷಯವನ್ನು ಅರಿತು ಸಹಜವಾಗಿ ಮಾತನಾಡುವರು | 8.1 ಆಶುಭಾಷಣ<br>8.2 ಕಿರುಭಾಷಣ | 8.1 ಪರಿಚಿತವಿರುವ ಸರಳ ವಿಷಯಗಳ ಆಶುಭಾಷಣ ಸ್ಪರ್ಧೆಯನ್ನು ನಡೆಸಿ. |
| 9 | ಪರಿಚಿತ ಸನ್ನಿವೇಶ ಅಥವಾ ಘಟನೆಯ ಬಗ್ಗೆ ನಿರರ್ಗಳವಾಗಿ ಮಾತನಾಡು ವರು | ಸೂಕ್ತ ಧ್ವನಿ ಏರಿಳಿತ, ಸ್ವರಭಾರದೊಂದಿಗೆ ಸಂಭಾಷಣೆ ಮಾಡುತ್ತಾರೆ | 9.1 ಸರಳ ಸಮಾಚಾರ<br>9.2 ಅಣಕು ಸಂದರ್ಶನ<br>9.3 ಸರಳ ನಾಟಕ | 9.1 ಪರಿಚಿತ ಸರಳ ಸನ್ನಿವೇಶವನ್ನು ನೀಡಿ ವಿದ್ಯಾರ್ಥಿಗಳಿಂದ ಸಂಭಾಷಣೆಯನ್ನು ಮಾಡಿಸುವುದು.<br>ಉದಾ : ವೈದ್ಯ ಮತ್ತು ರೋಗಿ ಇತ್ಯಾದಿ<br>9.2 ಒಂದು ಮಾದರಿ ಸಂದರ್ಶನವನ್ನು ಪ್ರದರ್ಶಿಸಿ ಅದನ್ನು ಆಧರಿಸಿ ವಿದ್ಯಾರ್ಥಿಗಳಿಂದ ಅಣಕು ಸಂದರ್ಶನ ಮಾಡಿಸಿ.<br>9.3 ವಿದ್ಯಾರ್ಥಿಗಳಿಂದ ಸರಳ ನಾಟಕವನ್ನು ಏರ್ಪಡಿಸಿ ಸಂಭಾಷಣೆಯನ್ನು ಪ್ರತಿ ವಿದ್ಯಾರ್ಥಿಯಿಂದ ಹೇಳಿಸಿ. |
| 10 | | ತಾನು ನೋಡಿದ/ ಕೇಳಿದ ಘಟನೆಯನ್ನು ವಿವರಿಸುತ್ತಾರೆ. | 10.1 ಸರಳ ವಿಚಾರ<br>10.2 ಪ್ರವಾಸ ಪರಿಚಯ<br>10.3 ಚರ್ಚೆ | 10.1 ವಿದ್ಯಾರ್ಥಿಯು ತಾನು ನೋಡಿರುವ ಅಥವಾ ಇತರರಿಂದ ಕೇಳಿರುವ ಘಟನೆಯನ್ನು ತನ್ನ ಮಾತುಗಳಲ್ಲಿ ಹೇಳಲು ತಿಳಿಸುವುದು.<br>10.2 ವಿದ್ಯಾರ್ಥಿ ತನ್ನ ಕುಟುಂಬ ಅಥವಾ ಶಾಲೆಯ ವತಿಯಿಂದ ಕೈಗೊಂಡಿರುವ ಪ್ರವಾಸದ ಅನುಭವಗಳನ್ನು ವ್ಯಕ್ತಪಡಿಸಲು ತಿಳಿಸಿ. |
| 11 | ಸರಳ ಪದಗಳನ್ನು ತಪ್ಪಿಲ್ಲದೆ ಓದುವರು | ವರ್ಣಮಾಲೆಯ ಅಕ್ಷರಗಳು, ಗುಣಿತಾಕ್ಷರ ಮತ್ತು ಸಂಯುಕ್ತಾಕ್ಷರಗಳ | 11.1 ಅಕ್ಷರ ನೋಡು-ಉಚ್ಚಾರ ಮಾಡು | 11.1 ಅಕ್ಷರಗಳ ಉಚ್ಚಾರಣಾ ಕ್ರಮ ಮತ್ತು ಧ್ವನ್ಯಂಗಗಳನ್ನು ಪರಿಚಯಿಸಿ, ಅಕ್ಷರಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಮಾರ್ಗದರ್ಶನ |

| | | | | |
|---|---|---|---|---|
| | | ನಡುವಿನ ವ್ಯತ್ಯಾಸವನ್ನು ಅರಿತು ಸ್ಪಷ್ಟವಾಗಿ ಉಚ್ಚರಿಸುತ್ತಾರೆ. | 11.2 ಗುರುತಿಸು - ಓದು | ನೀಡುವುದು.<br>ವರ್ಣಮಾಲೆ, ಗುಣಿತಾಕ್ಷರ ಹಾಗೂ ಸಂಯುಕ್ತಾಕ್ಷರದ ಮಿಂಚುಪಟ್ಟಿಯನ್ನು ನೀಡಿ ಸ್ಪಷ್ಟವಾಗಿ ಉಚ್ಚರಿಸಲು ನಿರ್ದೇಶನವನ್ನು ನೀಡುವುದು.<br>11.2 ಶಿಕ್ಷಕರು ಮಾದರಿ ಗದ್ಯವನ್ನು ಮಕ್ಕಳಿಗೆ ನೀಡಿ ಅದರಲ್ಲಿ ಉಚ್ಚರಿಸಿದ ಅಕ್ಷರವನ್ನು ಗುರುತಿಸಿ ಓದಲು ತಿಳಿಸಿ. |
| 12 | | ಎರಡು ಅಥವಾ ಮೂರು ಅಕ್ಷರಗಳನ್ನೊಳಗೊಂಡ ಪದಗಳನ್ನು ಓದುತ್ತಾರೆ | 12.1 ಅಕ್ಷರ ಸರಪಳಿ<br><br>12.2 ಪದಗಳನ್ನು ಓದಿಸುವುದು | 12.1 ಶಿಕ್ಷಕರು ನೀಡಿರುವ ಅಕ್ಷರಗಳಲ್ಲಿ ವಿದ್ಯಾರ್ಥಿಗಳಿಂದ ಸರಳ ಪದಗಳನ್ನು ರಚಿಸಿ ಓದಿಸುವುದು.<br>ಉದಾ- ವಿಜಯನಗರ<br>ವಿಜಯ ನಗರ<br>ಜಯ ನಗ<br>ಗಜ ಜನ…<br>ಈ ಮಾದರಿಯಂತೆ ಅಕ್ಷರಗಳನ್ನು ನೀಡಿ ಪದಗಳನ್ನು ರಚಿಸುವಂತೆ ಸಲಹೆ ನೀಡುವುದು.<br>12.2 ಹಿಂದಿನ ತರಗತಿಯ ಪಾಠಗಳಲ್ಲಿ ಇರುವ ಎರಡು ಅಥವಾ ಮೂರು ಅಕ್ಷರದ ಪದಗಳ ಪಟ್ಟಿ ಮಾಡಿಸುವುದು. ನಂತರ ಅವುಗಳನ್ನು ಓದಿಸುವುದು. |
| 13 | ಸರಳ ವಾಕ್ಯಗಳನ್ನು ತಪ್ಪಿಲ್ಲದೆ ಸ್ಪಷ್ಟವಾಗಿ ಓದುವರು. | ಸರಳ ಪದಗಳನ್ನು ಬಳಸಿ ಅರ್ಥಪೂರ್ಣವಾದ ಸರಳವಾಕ್ಯಗಳನ್ನು ರಚಿಸಿ ಓದುತ್ತಾರೆ. | 13.1 ಯೋಚಿಸಿ-ಜೋಡಿಸು | 13.1 ವಿದ್ಯಾರ್ಥಿಗಳಿಗೆ ಪದ ಕೋಷ್ಟಕಗಳನ್ನು ನೀಡಿ ಅದರಲ್ಲಿರುವ ಪದಗಳನ್ನು ಬಳಸಿ ಅರ್ಥಪೂರ್ಣ ವಾಕ್ಯ ರಚಿಸಿ ಓದುವಂತೆ ಪ್ರೇರೇಪಿಸುವುದು. |

| | | |
|---|---|---|
| ಕುವೆಂಪು | ದೀಪಗಳ | ಸುಂದರ |
| ಅಣೆಕಟ್ಟಿನಿಂದ | ನೋಡಲು | ಅನುಕೂಲ |
| ಗೀತಾ | ಐತರಿಗೆ | ಬರೆದರು |
| ಜಲಪಾತ | ನಾಡಗೀತೆ | ಹಬ್ಬ |
| ದೀಪಾವಳಿ | ಕವನ | ಬರೆದಳು |

| | | | | |
|---|---|---|---|---|
| | | | 13.2 ವಾಕ್ಯ – ಓದು | ಕರ್ತೃ, ಕರ್ಮ ಮತ್ತು ಕ್ರಿಯಾಪದಗಳ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯಿಸುವುದು.<br>13.2 ವಿದ್ಯಾರ್ಥಿಗಳಿಗೆ ವೃತ್ತಪತ್ರಿಕೆ/ನಿಯತಕಾಲಿಕೆಗಳಲ್ಲಿನ ಸರಳ ವಾಕ್ಯಗಳನ್ನು ಬರೆದು ಓದುವಂತೆ ತಿಳಿಸಿ. |
| 14 | | ಅಪರಿಚಿತ ಪದಗಳಿಗೆ ನಿಘಂಟಿನ ಸಹಾಯದಿಂದ ಅರ್ಥವನ್ನುಹುಡುಕಿ, ಸ್ವಂತ ವಾಕ್ಯವನ್ನು ರಚಿಸಿ ಓದುತ್ತಾರೆ. | 14.1 ಪದಕ್ಕೊಂದು ಅರ್ಥ - ಅರ್ಥಕ್ಕೊಂದು ವಾಕ್ಯ<br>14.2 ಗದ್ಯ ವಾಚನ<br>14.3 ಸುಭಾಷಿತ ಓದು | 14.1 ಶಿಕ್ಷಕರು ಅಪರಿಚಿತ ಪದಗಳ ಮಿಂಚುಪಟ್ಟಿಯನ್ನು ಮಕ್ಕಳಿಗೆ ನೀಡಿ, ಆ ಪದಗಳಿಗೆ ನಿಘಂಟಿನ ಸಹಾಯದಿಂದ ಅರ್ಥವನ್ನು ಹುಡುಕಿ ಅರ್ಥಪೂರ್ಣ ವಾಕ್ಯಗಳನ್ನು ರಚಿಸಿ ಓದಲು ಸೂಚಿಸುವುದು.<br>14.2 ವಿದ್ಯಾರ್ಥಿಗಳಿಂದ ಅಪರಿಚಿತ ಗದ್ಯಭಾಗವನ್ನು ಓದಿಸಿ, ಅದರಲ್ಲಿರುವ ಅಪರಿಚಿತ ಪದಗಳಿಗೆ ನಿಘಂಟಿನ ಸಹಾಯದಿಂದ ಅರ್ಥ ಹುಡುಕಿಸಿ.<br>14.3 ವಿದ್ಯಾರ್ಥಿಗಳಿಂದ ಸರಳ ಸುಭಾಷಿತಗಳನ್ನು ಓದಿಸಿ, ಅದರಲ್ಲಿರುವ ಅಪರಿಚಿತ ಪದಗಳಿಗೆ ನಿಘಂಟಿನ ಸಹಾಯದಿಂದ ಅರ್ಥ ಹುಡುಕಿಸಿ. |
| 15 | | ಧ್ವನಿ ವ್ಯತ್ಯಾಸವಿರುವ ಪದಗಳನ್ನುಒಳಗೊಂಡ ವಾಕ್ಯಗಳನ್ನು ಓದಿ ಅರ್ಥವನ್ನು ಗ್ರಹಿಸುತ್ತಾರೆ. | 15.1 ಧ್ವನಿ ವ್ಯತ್ಯಾಸ ಪದ ಓದು<br>15.2 ಓದಿನ ಒಗ್ಗರಣೆ | 15.1 ಶಿಕ್ಷಕರು ಧ್ವನಿ ವ್ಯತ್ಯಾಸವಿರುವ ಪದಗಳನ್ನು ಸಂಗ್ರಹಿಸಿ ಓದಿಸಿ<br>ಉದಾ : ಆಳು – ಹಾಳು, ಹುಳಿ – ಉಳಿ<br>15.2 ವಿದ್ಯಾರ್ಥಿಗಳಿಂದ ಧ್ವನಿ ವ್ಯತ್ಯಾಸವಿರುವ ಪದಗಳನ್ನು ಪಟ್ಟಿ ಮಾಡಿಸಿ, ಅರ್ಥಪೂರ್ಣ ವಾಕ್ಯಗಳನ್ನು ರಚಿಸಿ<br>ಉದಾ : ಹಕ್ಕಿಯು ಅಕ್ಕಿಯನ್ನು ತಿನ್ನುತ್ತದೆ.<br>ಅಣ್ಣನು ಅನ್ನವನ್ನು ಉಣ್ಣುತ್ತಾನೆ.<br>ಬಾಲೆಯು ಬಾಳೆಹಣ್ಣನ್ನು ತಿನ್ನುತ್ತಾಳೆ. |
| 16 | | ಸೂಚನಾ ಫಲಕದಲ್ಲಿರುವ ಹೇಳಿಕೆಗಳನ್ನು ಸ್ಪಷ್ಟ ಉಚ್ಚಾರದೊಂದಿಗೆ | 16.1 ಸೂಚನೆಗಳನ್ನು ಓದೋಣ<br>16.2 ಆಹ್ವಾನ ಪತ್ರಿಕೆ ಓದೋಣ | 16.1 ಶಿಕ್ಷಕರು ಸೂಚನಾ ಫಲಕದಲ್ಲಿರುವ ಹೇಳಿಕೆಗಳನ್ನು ಸಂಗ್ರಹಿಸಿ ವಿದ್ಯಾರ್ಥಿಗಳಿಂದ ಓದಿಸಿ ಸೂಚನಾ ಫಲಕದಲ್ಲಿರುವ ಸೂಚನೆಗಳನ್ನು ಸಂಗ್ರಹಿಸಿ ಬರೆಯುವ |

| | | | | |
|---|---|---|---|---|
| | | ನಿರರ್ಗಳವಾಗಿ<br>ಓದುತ್ತಾರೆ. | | ಚಟುವಟಿಕೆ ನೀಡಿರಿ.<br>16.2 ಜಾತ್ರೆ, ಗೃಹಪ್ರವೇಶದಂತಹ ಆಹ್ವಾನ ಪತ್ರಿಕೆಗಳನ್ನು ವಿದ್ಯಾರ್ಥಿಗಳಿಂದ ಸಂಗ್ರಹಿಸಿ ಓದಿಸಿ. |
| 17 | ಸರಳ ಪದ್ಯ ಮತ್ತು ಕಥೆಯನ್ನು ಗಟ್ಟಿಯಾಗಿ ಓದುವರು. | ಸರಳ ಕಥೆಗಳನ್ನು ಅರ್ಥೈಸಿಕೊಂಡು ಓದುತ್ತಾರೆ. | 17.1 ಕಥಾವಾಚನ<br>17.2 ನನ್ನ ಕಥೆ – ನನ್ನ ಓದು<br>17.3 ನನ್ನ ಖುಷಿ – ನನ್ನ ಓದು | 17.1 ಜನಪ್ರಿಯ ಪರಿಚಿತ ಸರಳ ಕಥೆಗಳನ್ನು ನೀಡಿ ಓದಿಸಿ.<br>17.2 ವಿದ್ಯಾರ್ಥಿಗಳಿಗೆ ಕೆಲವು ಪದಗಳನ್ನು ನೀಡಿ ಅವುಗಳನ್ನು ಬಳಸಿಕೊಂಡು ಕಥೆಯನ್ನು ರಚಿಸಿ ಓದಲು ಸೂಚಿಸಿ.<br>17.3 ವಿದ್ಯಾರ್ಥಿಯು ಇಷ್ಟಪಡುವ ಯಾವುದಾದರೂ ಗದ್ಯದ ನಿಗದಿತ ಭಾಗವನ್ನು ಓದಿಸಿ. |
| 18 | | ಅಕ್ಷರ ಉಚ್ಚಾರಣೆಯ ಕ್ರಮವರಿತು ಧ್ವನಿ ಏರಿಳಿತದೊಂದಿಗೆ ಪದ್ಯವನ್ನು ಲಯಬದ್ಧವಾಗಿ ಸ್ಪಷ್ಟವಾಗಿ ಓದುತ್ತಾರೆ. | 18.1 ಪದ್ಯವನ್ನು ಓದೋಣ<br>18.2 ಹಾಡು-ಪಾಡು<br>18.3 ಗಿರಿಗಿಟ್ಟಲೆ | 18.1 ಸರಳ ಪದ್ಯಗಳನ್ನು ಸೂಕ್ತ ಸ್ವರಭಾರದೊಂದಿಗೆ ಓದಲು ಪ್ರೇರೇಪಿಸುವುದು.<br>18.2 ಪದ್ಯಭಾಗಕ್ಕೆ ರಾಗ ಸಂಯೋಜನೆಯನ್ನು ಮಾಡಿಸಿ ರಾಗವಾಗಿ ಹಾಡಿಸುವುದು.<br>18.3 ಹಿಂದಿನ ತರಗತಿಯ ಪದ್ಯಗಳನ್ನು ನೀಡಿ 2/4 ಸಾಲುಗಳನ್ನು ಪ್ರತಿ ವಿದ್ಯಾರ್ಥಿಗಳಿಂದ ಕ್ರಮವಾಗಿ ಓದಿಸಿ. |
| 19 | | ಸ, ಶ, ಷ,<br>ಹ್ರಸ್ವಸ್ವರ-<br>ದೀರ್ಘಸ್ವರ,<br>ಅಲ್ಪಪ್ರಾಣ-<br>ಮಹಾಪ್ರಾಣಗಳಉ<br>ಚ್ಚಾರದಲ್ಲಿನವ್ಯ<br>ತ್ಯಾಸವನ್ನರಿತುಸ್ಪ<br>ಷ್ಟವಾಗಿ<br>ಉಚ್ಚರಿಸುತ್ತಾರೆ. | 19.1 ಮುದ್ರಿತ ಪತ್ರ ಓದುವುದು<br>19.2 ಓದುವೆ ಕರಪತ್ರ<br>19.3 ಪತ್ರಿಕೆ ವಾಚನ<br>19.4 ಕೈಬರಹ ಓದು | 18.3 ಮುದ್ರಿತ ಭಾಗ /ನಿಯತ ಕಾಲಿಕ / ವೃತ್ತ ಪತ್ರಿಕೆ / ಕರಪತ್ರಗಳಲ್ಲಿ ನಿಗದಿತ ಭಾಗವನ್ನು ಓದಲು ಹೇಳಿ ಅದರಲ್ಲಿ ಸ, ಶ ಮತ್ತು ಷ ಅಕ್ಷರಗಳನ್ನೊಳಗೊಂಡ ಹಾಗೂ ಅಲ್ಪಪ್ರಾಣ, ಮಹಾಪ್ರಾಣ ಹೊಂದಿರುವ ಪದಗಳನ್ನು ಪಟ್ಟಿ ಮಾಡಿಸಿ ಓದಿಸಿ. |
| 20 | ಅಕ್ಷರ ಮತ್ತು ಪದಗಳನ್ನು ನೋಡಿ | ಅಕ್ಷರ, ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು | 20.1 ನಕಲು ಮಾಡು-ಪಕ್ಕ ಆಗು | 20.1 ಅಕ್ಷರಗಳ ಸರಿಯಾದ ವಿನ್ಯಾಸ ಮತ್ತು ಬರೆಯುವ ಸರಿಯಾದ ಕ್ರಮವನ್ನು ಪರಿಚಯಿಸಿ ಪುಸ್ತಕ ನೋಡಿ 8-10 |

<table>
<tr><td></td><td>ಸೂಕ್ತ ಗಾತ್ರ ಮತ್ತು ಅಂತರದಲ್ಲಿ ಬರೆಯುವರು</td><td>ನೋಡಿ ಬರೆಯುತ್ತಾರೆ.</td><td>20.2 ಉಕ್ತಲೇಖನ</td><td>ಸಾಲು ಬರೆಯಿಸುವುದು.<br>20.2 ಕೆಲವು ಸರಳ ಪದಗಳ ಉಕ್ತಲೇಖನವನ್ನು ನೀಡಿರಿ.</td></tr>
<tr><td>21</td><td></td><td>ಪದಗಳನ್ನು ನೋಡಿ ಅಂದವಾಗಿ ಬರೆಯುತ್ತಾರೆ</td><td>21.1 ನೋಡಿ - ಬರೆ</td><td>21.1 ಶಿಕ್ಷಕರು ಕೆಲವು ಪದಗಳನ್ನು ಕಪ್ಪು ಹಲಗೆಯ ಮೇಲೆ ಅಂದವಾಗಿ ಬರೆದು, ವಿದ್ಯಾರ್ಥಿ ಅದನ್ನು ನೋಡಿ ಮಾದರಿಯಂತೆಯೇ ಅಂದವಾಗಿ ಬರೆಯಲು ಸೂಚಿಸಿ.<br>ನಕಲು ಬರವಣಿಗೆ ಪುಸ್ತಕದಲ್ಲಿ ಪದಗಳನ್ನು ಬರೆಸಿ</td></tr>
<tr><td>22</td><td rowspan="2">ಪರಿಚಿತ ಸರಳ ಪದ ಮತ್ತು ವಾಕ್ಯವನ್ನು ತಪ್ಪಿಲ್ಲದೆ ಬರೆಯುವರು</td><td>ಆಲಿಸಿದ ಸರಳ ಪದ ಮತ್ತು ವಾಕ್ಯಗಳನ್ನು ತಪ್ಪಿಲ್ಲದಂತೆ ಬರೆಯುತ್ತಾರೆ.</td><td>22.1 ಪದ ರಚನೆ<br><br>22.2 ರೈಲು ಹಳಿ</td><td>22.1 ಈ ಕೆಳಗಿನ ಚೌಕದಲ್ಲಿರುವ ಅಕ್ಷರಗಳನ್ನು ಬಳಸಿ ಎರಡು-ಮೂರು ಅಕ್ಷರಗಳ ಪದಗಳನ್ನು ಬರೆಸಿ.
<table>
<tr><td>ಮೆ</td><td>ಟ್ಟಿ</td><td>ಲು</td><td>ನ</td><td>ಕೈ</td><td>ದಿ</td></tr>
<tr><td>ಚ್ಚು</td><td>ಭ</td><td>ತ್ತ</td><td>ಮ್ಮ</td><td>ತೋ</td><td>ಪು</td></tr>
<tr><td>ಗೆ</td><td>ರೆ</td><td>ಕ</td><td>ರ್ನಾ</td><td>ಟ</td><td>ಕ</td></tr>
<tr><td>ನ</td><td>ಬ</td><td>ರ</td><td>ವು</td><td>ಅಂ</td><td>ದ</td></tr>
<tr><td>ಜ</td><td>ರ</td><td>ಡಿ</td><td>ಲು</td><td>ಳ</td><td>ಯ್ಯ</td></tr>
<tr><td>ಪ</td><td>ಹ</td><td>ಲ</td><td>ಗೆ</td><td>ಲು</td><td>ವು</td></tr>
</table>
ವಿದ್ಯಾರ್ಥಿಗಳಿಗೆ ಒಂದು ಸರಳ ಪದವನ್ನು ನೀಡಿ ಆ ಪದದ ಅಂತ್ಯ ಪದಕ್ಕೆ ಮತ್ತೊಂದು ಪದವನ್ನು ರಚಿಸುತ್ತಾ ಸಾಗುವಂತೆ ತಿಳಸುವುದು<br>ಉದಾ- ಸಮಯ- ಯಮ-ಮನ-ನಯನ-ನಮನ-ನರ-ರಜ-ಜನ…..ಈ ಮಾದರಿಯಂತೆ ಪದ ರಚಿಸಲು ತಿಳಿಸುವುದು.</td></tr>
<tr><td>23</td><td>ನೀಡಿದ ಪದಗಳನ್ನು ಬಳಸಿ</td><td>23.1 ಸ್ವಂತ ವಾಕ್ಯ ರಚನೆ</td><td>23.1 ಶಿಕ್ಷಕರು ಕೆಲವು ಪದಗಳನ್ನು ಬರೆಸಿ, ಅವುಗಳನ್ನು ಬಳಸಿಕೊಂಡು</td></tr>
</table>

| | | | | |
|---|---|---|---|---|
| | | ಸ್ವಂತವಾಕ್ಯವನ್ನು ರಚಿಸುತ್ತಾರೆ. | ಮಾಡೋಣ<br>23.2 ಘೋಷ ವಾಕ್ಯ ರಚಿಸೋಣ | ಅರ್ಥಪೂರ್ಣ ವಾಕ್ಯವನ್ನು ರಚಿಸಲು ನಿರ್ದೇಶಿಸುವುದು.<br>23.2 ವಿದ್ಯಾರ್ಥಿಗಳಿಗೆ ಕೆಲವು ಪದಗಳನ್ನು ನೀಡಿ ಅವುಗಳನ್ನು ಬಳಸಿಕೊಂಡು ಪರಿಸರ ಮತ್ತು ಆರೋಗ್ಯ ಸಂಬಂಧಿ ಘೋಷವಾಕ್ಯಗಳನ್ನು ರಚಿಸಲು ನಿರ್ದೇಶಿಸಿ.<br>ಉದಾ : ಕಾಡು, ನಾಡು, ಅರಣ್ಯ, ಆರೋಗ್ಯ, ಶುಚಿತ್ವ<br>ವಾಕ್ಯ : ಕಾಡಿದ್ದರೆ ನಾಡು ನಾಡಿದ್ದರೆ ನಾವು |
| 24 | | ವಾಕ್ಯಗಳನ್ನು ಸ್ವತಂತ್ರವಾಗಿ ನಿಯಮಗಳನ್ನು ಅನುಸರಿಸಿ ಬರೆಯುತ್ತಾರೆ. | 24.1 ಒಂದುಚಿತ್ರ - ನಾಲ್ಕು ವಾಕ್ಯ<br>18.3 ಚಿತ್ರ-ಕಥೆ | 24.1 ಶಿಕ್ಷಕರು ವಿದ್ಯಾರ್ಥಿಗಳಿಗೆ ಕೆಲವು ಚಿತ್ರಪಟಗಳನ್ನು ಪ್ರದರ್ಶಿಸಿ, ನಾಲ್ಕೈದು ವಾಕ್ಯಗಳಲ್ಲಿ ಚಿತ್ರದಲ್ಲಿರುವ ಸನ್ನಿವೇಶವನ್ನು ಕುರಿತು ಬರೆಯುವಂತೆ ಸೂಚಿಸುವುದು.<br>24.2 ವಿದ್ಯಾರ್ಥಿಗಳಿಗೆ ಚಿತ್ರ ಸರಣಿಯನ್ನು ಪ್ರದರ್ಶಿಸಿ, ಆ ಚಿತ್ರಸರಣಿಯ ಕಥೆಯನ್ನು ಬರೆಸಿ |
| 25 | | ವಾಕ್ಯದಲ್ಲಿರುವ ದೋಷಗಳನ್ನು ಸರಿಪಡಿಸಿ ಬರೆಯುತ್ತಾರೆ. | 25.1 ಯೋಚಿಸು-ಹೊಂದಿಸು<br>25.2 ವಾಕ್ಯವನ್ನು ಸರಿಯಾಗಿ ಜೋಡಿಸಿ ಬರೆ<br>25.3 ಅಶುದ್ಧದಿಂದ – ಶುದ್ಧ ವಾಕ್ಯದೆಡೆಗೆ | 25.1 ಶಿಕ್ಷಕರು ವಿದ್ಯಾರ್ಥಿಗಳಿಗೆ ಸೂಚನೆಗಳನ್ನು ಒಳಗೊಂಡ ವಾಕ್ಯಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಅದಲು ಬದಲು ಮಾಡಿ ಕೊಟ್ಟು, ವಿದ್ಯಾರ್ಥಿಗಳು ಅದನ್ನು ಸರಿಯಾಗಿ ಹೊಂದಿಸಿ ಬರೆಯುವಂತೆ ಮಾರ್ಗದರ್ಶನ ಮಾಡಿರಿ.ಉದಾ- ಕಸವನ್ನು ಕಸದ ತೊಟ್ಟಿಯಲ್ಲೇ ಹಾಕು, ಸಾಬೂನಿನಿಂದ ಕೈ ತೊಳಿ.<br>25.2 ಪದಗಳು ಅಸ್ತವ್ಯಸ್ತವಾಗಿರುವ ವಾಕ್ಯಗಳನ್ನು ನೀಡಿ ವಾಕ್ಯವನ್ನು ಸರಿಪಡಿಸಿ ಬರೆಯುವಂತೆ ಸೂಚಿಸಿ<br>ಉದಾ- ಮೂರು ಬಣ್ಣಗಳಿಂದ ಕೂಡಿದ ನಮ್ಮ ದೇಶದ ಬಾವುಟ<br>ನಮ್ಮ ದೇಶದ ಬಾವುಟ ಮೂರು |

| | | | | |
|---|---|---|---|---|
| | | | | ಬಣ್ಣಗಳಿಂದ ಕೂಡಿದೆ.<br>25.3 ಲಿಂಗ, ವಚನ ಮತ್ತು ಕಾಲಕ್ಕೆ ಸಂಬಂಧಿಸಿದ ಕೆಲವು ದೋಷಯುಕ್ತ ವಾಕ್ಯಗಳನ್ನು ನೀಡಿ, ವಿದ್ಯಾರ್ಥಿಳಿಂದ ಸರಿಪಡಿಸಿ ಬರೆಸಿ.<br>ಉದಾ : ಹುಡುಗನು ವೇಗವಾಗಿ ಓಡಿದಳು (ಲಿಂಗ)<br>ಪಕ್ಷಿಯು ಇಂಪಾಗಿ ಹಾಡಿದವು (ವಚನ) |
| 26 | ಭಾಷಾಂಶಗಳನ್ನು ಅರಿತುಕೊಳ್ಳುವರು. | ವಿರುದ್ಧಾರ್ಥಕ ಪದಗಳನ್ನು ತಿಳಿಯುತ್ತಾರೆ. | 26.1 ಪತ್ತೆ ಹಚ್ಚಿ ಬರೆ<br>26.2 ಕ್ರಿಯೆ – ಪ್ರತಿಕ್ರಿಯೆ<br>26.3 ಬಿಟ್ಟ ಸ್ಥಳ ತುಂಬಿ | 26.1 ತರಗತಿಯಲ್ಲಿ ಗುಂಪು ರಚಿಸಿ ಹಿಂದಿನ ತರಗತಿಯಲ್ಲಿ ಪರಿಚಯಿಸಿರುವ ವಿರುದ್ಧಾರ್ಥಕ ಪದಗಳಿರುವ ಮಿಂಚುಪಟ್ಟಿ ನೀಡಿ ಮಕ್ಕಳಿಂದ ಪತ್ತೆ ಹಚ್ಚಿಸಿ ಅವುಗಳ ವಿರುದ್ಧಾರ್ಥಕ ಪದಗಳನ್ನು ಹೇಳಿಸುವುದು ನಂತರ ಪಟ್ಟಿ ಮಾಡಿಬರೆಸಿ.<br>26.2 ತರಗತಿಯನ್ನು ಎರಡು ಗುಂಪುಗಳನ್ನಾಗಿ ಮಾಡಿ ಒಂದು ಗುಂಪಿನ ವಿದ್ಯಾರ್ಥಿಗಳಿಂದ ವಿರುದ್ಧ ಪದವಿರುವ ವಾಕ್ಯವನ್ನು ಹೇಳಿಸಿ, ಮತ್ತೊಂದು ಗುಂಪಿನ ವಿದ್ಯಾರ್ಥಿಗಳಿಂದ ಆ ವಾಕ್ಯಕ್ಕೆ ವಿರುದ್ಧ ವಾಕ್ಯವನ್ನು ಹೇಳಿಸಿ. |
| 27 | | ಸಮಾನಾರ್ಥಕ ಮತ್ತು ನಾನಾರ್ಥಕ ಪದಗಳನ್ನು ತಿಳಿಯುತ್ತಾರೆ. | 27.1 ಹೊಂದಿಸಿ ಬರೆ<br>27.2 ಏಕ-ಅನೇಕ | 27.1 ಹಿಂದಿನ ತರಗತಿಯಲ್ಲಿ ಪರಿಚಯಿಸಿರುವ ಸಮಾನಾರ್ಥಕ ಮತ್ತು ನಾನಾರ್ಥಕ ಪದಗಳ ಪಟ್ಟಿಯನ್ನು ನೀಡಿ ಅವುಗಳನ್ನು ಹೊಂದಿಸಿ ಬರೆಸಿ<br>27.2 ನಾನಾರ್ಥ ಪದಗಳ ವಿವಿಧ ಅರ್ಥಗಳನ್ನು ತಿಳಿಸುವುದು ಮತ್ತು ವಾಕ್ಯ ರಚಿಸಿ. |
| 28 | | ಅನ್ಯಲಿಂಗ ಮತ್ತು ವಚನಗಳನ್ನು ತಿಳಿಯುತ್ತಾರೆ | 28.1 ಪದಗಳಿಗೊಂದು ವಾಕ್ಯ<br>28.2 ಚಾರ್ಟ್ | 28.1 ತರಗತಿಯಲ್ಲಿ ಲಿಂಗ ಮತ್ತು ವಚನಗಳಿಗೆ ವಿದ್ಯಾರ್ಥಿಗಳ ಎರಡು ಪ್ರತ್ಯೇಕ ಗುಂಪುಗಳನ್ನು ರಚಿಸುವುದು. |

| | | | | |
|---|---|---|---|---|
| | | | ತಯಾರಿಕೆ | ಕೆಲವು ಕ್ರಿಯಾಪದಗಳನ್ನು ನೀಡಿ, ಆಯಾ ಗುಂಪಿನವರು ತಮಗೆ ಸಂಬಂಧಿಸಿದ ಲಿಂಗ ಅಥವಾ ವಚನವನ್ನು ಬಳಸಿ ವಾಕ್ಯ ರಚಿಸಿ ಓದುವಂತೆ ತಿಳಿಸಿ. |
| 29 | ಜೀವನ ಮೌಲ್ಯಗಳನ್ನು ಮೈಗೂಡಿಸಿ ಕೊಳ್ಳುವರು | ಸೂಕ್ತ ಗೌರವಸೂಚಕ ಪದಗಳನ್ನು ಬಳಸಿ ಮಾತನಾಡುತ್ತಾರೆ | 29.1 ಪಾತ್ರಕ್ಕೊಂದು ಸಂಭಾಷಣೆ<br>29.2 ಏಕಪಾತ್ರಾಭಿನಯ<br>29.3 ನಾಟಕ | 29.1 ವಿದ್ಯಾರ್ಥಿಗಳಿಗೆ ತಂದೆ-ಮಗ, ಹಿರಿಯ-ಕಿರಿಯ ಈ ರೀತಿ ಪಾತ್ರಗಳನ್ನು ನೀಡಿ ಸಂಭಾಷಣೆ ಮಾಡಿಸಿ.<br>29.2 ಮೌಲ್ಯಯುತ ಪಾತ್ರಗಳ ಏಕಪಾತ್ರಾಭಿನಯ ಮಾಡಿಸಿ<br>29.3 ಮೌಲ್ಯಯುತ ನಾಟಕವನ್ನು ಪ್ರದರ್ಶಿಸಿ, ವಿದ್ಯಾರ್ಥಿಗಳಿಂದ ಮೌಲ್ಯಗಳನ್ನು ಪಟ್ಟಿ ಮಾಡಿಸಿ ಚರ್ಚಿಸಿ. |
| 30 | | ನಾಡು-ನುಡಿಯನ್ನು ಕುರಿತು ಪ್ರಶಂಸೆಯನ್ನು ವ್ಯಕ್ತಪಡಿಸುತ್ತಾರೆ | 30.1 ನಾಡಭಕ್ತಿಗೀತೆ / ದೇಶಭಕ್ತಿ ಗೀತೆಗಳನ್ನು ಹಾಡಿಸುವುದು | 30.1 ನಾಡು-ನುಡಿಯ ವರ್ಣನೆ ಇರುವ ಹಾಡುಗಳನ್ನು ಹಾಡಿಸುವುದು.<br>ವಿದ್ಯಾರ್ಥಿಗಳು ಮೆಚ್ಚಿದ ಅಂಶಗಳನ್ನು ಹೇಳಿಸುವುದು. |
| | | ದೇಶಭಕ್ತರ ತ್ಯಾಗ, ಬಲಿದಾನವನ್ನು ಪ್ರಶಂಸಿಸುವರು. | 30.2 ವ್ಯಕ್ತಿಚರಿತೆ/ ಪರಿಚಯ | 30.2 ದೇಶಭಕ್ತರ ಬಗ್ಗೆ ವಿದ್ಯಾರ್ಥಿಗಳಿಗೆ ಇಷ್ಟವಾಗುವ ಅಂಶಗಳನ್ನು ಪಟ್ಟಿ ಮಾಡಿಸುವುದು. |